MYSORE LEGISLATIVE ASSEMBLY

Tuesday, 18th July 1967.

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER [Sri B. VAIKUNTA BALIGA, B.A., B.L.] in the Chair.

STARRED QUESTIONS

(to which oral answers were given)

Supply of Electric Motors and Pumpsets

*Q.—28. Sri B. GANGANNA (Kallambella).—

Will the Chief Minister be pleased to state :—

whether Government intend to release the Hire-purchase supply of electric motors and pumpsets and oil engines and pumpsets to Ryots through Electricity Board and Agriculture Department and make a general policy to supply these irrigation pumpsets through the Mysose Central Land Development Bank since this Bank is the Financing Agent for irrigation wells also ?

A.—Sri S. NIJALINGAPPA (Chief Minister).—

This is under consideration of Government.

ಶ್ರೀ ಬಿ. ಗಂಗಣ್ಣ.—ನನ್ನ ಪ್ರಶ್ನೆಗೆ ಉತ್ತರವಾಗಿ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ಈಗಲೇ ಜಾರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರ ಕ್ಯಾಬಿನೆಟ್ ಸಬ್-ಕಮಿಟಿ ಮುಂದಿನೆ. ಅವರು ಕೆಲವು ಶಿಫಾರಸುಗಳನ್ನು ಕಳುಹಿಸಿದ್ದಾರೆ. ಅದಷ್ಟು ಜಾಗ್ರತೆ ಈಗಿರತಕ್ಕಂಥ ಕಷ್ಟಗಳನ್ನು ಪರಿಹಾರ ಮಾಡಿ ರೈತರುಗಳಿಗೆ ನೀರಾವರಿ ಬಾವಿಗಳಿಗೆ, ಪಂಪ್‌ಸೆಟ್ಟುಗಳಿಗೆ ಬೇಕಾಗುವ ಸಾಲ ಬೇಗ ಸಿಗುವುದಕ್ಕೆ ಏನೇನು ಮಾಡಬೇಕೆಂಬುದು ತೀವ್ರವಾದ ಆಲೋಚನೆಯಲ್ಲಿದೆ. ಒಂದೆರಡು ವಾರಗಳಲ್ಲಿ ತೀರ್ಮಾನವಾಗಬಹುದೆಂಬ ನಿರೀಕ್ಷೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ರೈತರುಗಳಿಗೆ ಪಂಪ್‌ಸೆಟ್ಟುಗಳನ್ನು ಸಾಲವಾಗಿ ಕೊಡುವ ಧಾರಣೆಗೂ ಓಪನ್ ಮಾರ್ಕೆಟ್ ಬೆಲೆಗೂ ಒಂದು ಸಾವಿರ ರೂಪಾಯಿಗಳ ಅಂತರವಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಒಂದು ವೇಳೆ ರೈತರುಗಳಿಗೆ ನೀರವಾಗಿ ಹಣವನ್ನು ಕೊಟ್ಟು, ಅವರು ಓಪನ್ ಮಾರ್ಕೆಟ್‌ನಲ್ಲಿ ಸ್ವತಃ ಪಂಪ್‌ಸೆಟ್ಟುಗಳನ್ನು ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ? ಇಲ್ಲದಿದ್ದರೆ ಈಗಿರುವ ವ್ಯತ್ಯಾಸವನ್ನು ಸರಿಪಡಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸಾವಿರ ರೂಪಾಯಿಗಳ ವ್ಯತ್ಯಾಸವಿರುವುದು ಗೊತ್ತಿಲ್ಲ. ರೈತರು ತಾವೇ ತೆಗೆದುಕೊಂಡರೆ ನಮ್ಮದು ಅಡ್ಡಿಯಿಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ.—ತಹಸೀಲ್‌ದಾರರು ರೈತರುಗಳಿಗೆ ಪಂಪ್‌ಸೆಟ್ಟುಗಳನ್ನು ಕೊಳ್ಳಲು ಕೊಡುವ ಹಣ ನಿಧಾನವಾಗುತ್ತಿದೆ. ರೈತರಿಗೆ ಈ ಹಣ ಮುಟ್ಟುವುದು ನಿಧಾನವಾಗುತ್ತಿರುವುದರಿಂದ ಅವರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ರೈತರಿಗೆ ನೇರವಾಗಿ ಹಣ ಮುಟ್ಟುವಂತೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರದಲ್ಲಿ ಅನೇಕ ರೀತಿಯ ಸಲಹೆಗಳು ಬಂದಿರುವುದರಿಂದ, ಹಣ ಕೊಡುವ ಕಾಲವನ್ನು ಕಡಿಮೆ ಮಾಡಬೇಕೆಂದು ಸಬ್-ಕಮಿಟಿ ರಿಪೋರ್ಟ್ ಬಂದಿದೆ. ಈ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ. ರಾಮೇಗೌಡ.—ಎಣ್ಣೆ ಇಂಜಿನ್‌ಗಳನ್ನು ರೈತರಿಗೆ ಕೊಡುವ ಅಧಿಕಾರ ಭೂ ಅಭಿವೃದ್ಧಿ ಬ್ಯಾಂಕಿಗೆ ಹೋದಮೇಲೆ, ಈಗ ಕೊಡುತ್ತಿರುವ ಸಬ್ಸಿಡಿಯನ್ನು ಮುಂದುವರಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಯಾರಿಗೆ ಕೊಡಬೇಕೆಂಬುದು ವಿಚಾರದಲ್ಲಿದೆ. ಒಂದೇ ಸಂಸ್ಥೆಗೆ ಕೊಡಬೇಕೆನ್ನುವ ದೃಷ್ಟಿಯಿದೆ. ಆ ವಿಚಾರದಲ್ಲಿ ಜಾಗ್ರತೆ ಕಾನೂನು ಮಾಡಿದರೆ ಈ ಕಷ್ಟಗಳು ತಪ್ಪುತ್ತದೆಂಬ ಅಭಿಪ್ರಾಯವಿದೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಡಾ. ಆರ್. ನಾಗನಗೌಡ.—ಇತ್ತೀಚೆಗೆ ಡೀಪ್ ಬೋರ್ ವೆಲ್ಸ್‌ನ್ನು ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರು, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಹಾಕುತ್ತಾ ಇದ್ದಾರೆ, ಅವರಿಗೆ ಬೇಕಾದ ಸ್ಪೆಷಲ್ ಪಂಪ್‌ಸೆಟ್ಟನ್ನು ಇದೇ ರೀತಿಯಲ್ಲಿ ಇನ್‌ಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿದೆ. ಧಾರ್‌ವಾರ್ ಸಿನ್ಸ್ ಅಂತ ರಾಕ್‌ಫಾರ್ಮೇಷನ್ ಇರುತ್ತದೆ ಆಳವಾಗಿ ಬೋರ್‌ವೆಲ್ಸ್ ಹಾಕುವುದು ಅಂತಹ ಕಡೆ ಕಷ್ಟ ಇದೆ, 3-4 ಸಾವಿರ ಅಡಿ ಕೆಳಗೆ ಹೋಗಬಹುದು ಎಂದು ಕಾಣುತ್ತದೆ, ಅಂತೂ ಪ್ರಯತ್ನ ನಡೆಸುತ್ತಾ ಇದ್ದಾರೆ, ಸಹಾನುಭೂತಿಯಿಂದ ನೋಡುತ್ತೇವೆ, ಅದೂ ಅಲ್ಲದೆ ಬೇರೆ ಪಂಪ್‌ಸೆಟ್ಸ್ ಬೇಕಾದರೆ ಅದಕ್ಕೆ ಏನು ಸಾಲತ್ತು ಕೊಡಬೇಕೋ ಅದನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಎನ್. ಎಸ್. ಪಾಟೀಲ್.—ಈ ಬಾವಿ ತೆಗೆಯುವ ಸಲುವಾಗಿ ಬ್ಲಾಸ್ಟಿಂಗ್ ಮೆಷಿನ್ ತರಿಸಿಕೊಟ್ಟರೆ ಈ ಕೆಲಸ ಚೆನ್ನಾಗಿ ಆಗುತ್ತದೆ. ಅವುಗಳನ್ನು ಏಕೆ ತರಿಸಿ ಕೊಡಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಸೂಚನೆಯನ್ನು ಗಮನವಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.—ಜಮೀನು ಅಭಿವೃದ್ಧಿ ಬ್ಯಾಂಕಿನ ಮುಖೇನ ನೀರಾವರಿ ಬಾವಿಗಳಿಗೆ ಪಂಪ್‌ಸೆಟ್ಸ್ ಕೊಡುವುದು ಸರ್ಕಾರದಿಂದ ತೀರ್ಮಾನವಾದ ಮೇಲೆ ಅವರು ಅನುಸರಿಸುತ್ತಾ ಇರತಕ್ಕ ಪ್ರೊಸೀಜರ್‌ನಿಂದ ತಾಂತ್ರಿಕ ಉಪಕರಣಗಳನ್ನು ಕೊಡುವುದು ತಡ ಆಗುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಕೊಡುವುದೇ ಹೆಚ್ಚು ಅನುಕೂಲವಾಗುತ್ತದೆ, ಇಂದೆರಡು ಕಡೆ ಅನಾನುಕೂಲವಾಗಿರಬಹುದು. ಎರಡ್ಲಾ ತಡವಾಗಬಾರದು, ಶೀಘ್ರವಾಗಿ ಆಗಬೇಕು ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡೇ ಆ ರೀತಿ ಮಾಡಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಹೈರ್‌ಪರ್ಚೇಸ್ ಸಿಸ್ಟಂ ಮೇಲೆ ಕೊಡತಕ್ಕ ಈ ಪಂಪ್‌ಸೆಟ್ಟುಗಳಿಗೆ ಇದುವರೆಗೂ ಅರ್ಜಿಗಳು ಬಂದು ಕೊಡದೇ ಇರುವುದು ಎಷ್ಟು ಇವೆ ?

ಶ್ರೀ ಎಸ್. ನಿಜಲಿಂಗಪ್ಪ.—ಕಂಡೀಷನ್‌ಗೆ ಹೊಂದಿಕೆಯಾಗದಿದ್ದರೆ ಕೊಡುವುದಕ್ಕಾಗುವುದಿಲ್ಲ.

Sri H. C. LINGA REDDY.—May I know whether any target figure has been fixed with regard to pump sets and also the irrigation wells in the IV Plan, if so, the number and cost ?

Sri S. NIJALINGAPPA —Let my friend ask another question ; my remembrance is round about 20,000 a year and it may be a lakh of wells during the IV Plan.

ಶ್ರೀ ಬಿ. ಭಾಸ್ಕರಶೆಟ್ಟಿ.—ಇಷ್ಟರತನಕ ಈ ಭೂ ಅಭಿವೃದ್ಧಿ ಬ್ಯಾಂಕಿನವರು ಎಷ್ಟು ಬಾವಿಗಳಿಗೆ ಹಣ ಕೊಟ್ಟಿದ್ದಾರೆ ? ಒಟ್ಟು ಮೊತ್ತ ಎಷ್ಟಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಬೇರೆ ಪ್ರಶ್ನೆ ಕೇಳಬೇಕಾಗುತ್ತದೆ, ಅದು ಈ ಪ್ರಶ್ನೆಗೆ ಸಂಬಂಧಿಸಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಲ್ಯಾಂಡ್ ಡೆವಲಪ್‌ಮೆಂಟ್ ಸೊಸೈಟಿ ಮೂಲಕ ಹಣ ಕೊಡುತ್ತಾ ಇದ್ದೀರಿ. ತಾಲ್ಲೂಕು ಮಟ್ಟದಲ್ಲಿ ಪಕ್ಷಗಳು, ಪಂಗಡಗಳವರು ಗುಂಪು ಸೇರಿ ಒಂದೇ ಪಂಗಡದವರಾಗುತ್ತಾರೆ. ನಮ್ಮ ತಾಲ್ಲೂಕಿನ ಸೊಸೈಟಿಯಲ್ಲಿ ಇನ್ನೂ ಕೂಡ ಜನರಲ್ ಬಾಡಿ ಆಗಿಲ್ಲ. ಹೀಗಾಗಿ ಒಂದು ಪಕ್ಷದವರಿಗೇ ಹಣ ಸಿಕ್ಕುತ್ತಾ ಇದೆ. ಡಿಪಾರ್ಟ್‌ಮೆಂಟಿನವರಾದರೆ ಎಲ್ಲಿ ಅಗತ್ಯ ಇದೆ ಅಂತಹವರಿಗೆ ಕೊಡುತ್ತಾ ಇದ್ದರು. ಆದ್ದರಿಂದ ದಯವಿಟ್ಟು ಸಂಸ್ಥೆಗಳಿಗೆ ಈ ಅಧಿಕಾರವನ್ನು ಕೊಡದೇ ಅಧಿಕಾರಿಗಳ ಹತ್ತಿರ ಅಥವ ತಾಲ್ಲೂಕು ಬೋರ್ಡಿಗೆ ಈ ಅಧಿಕಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರ ಇವತ್ತೇ ತಿಳಿದದ್ದು, ಇಂತಹ ಪುಕಾರು ಇದುವರೆಗೂ ಬಂದಿರಲಿಲ್ಲ, ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಕಡೆ ಡೀಪ್ ಬೋರ್ ವೆಲ್ಸ್ ಹಾಕಬೇಕಾದರೆ 11 ಸಾವಿರ ರೂಪಾಯಿಗಳವರೆಗೂ ಬೇಕಾಗುತ್ತದೆ, ತಾವು ಕೊಡುವುದು 4 ಅಥವಾ 5 ಸಾವಿರ ರೂಪಾಯಿ, ಆದ್ದರಿಂದ ಇದನ್ನು ಹೆಚ್ಚು ಮಾಡುವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಒಂದು ರೀತಿಯಾಗಿ ಆಗಲೇ ಉತ್ತರ ಕೊಟ್ಟಿದ್ದೇನೆ. ಒಬ್ಬ ರೈತನಿಂದ ತೆಗೆಯುತಕ್ಕ ಕೆಲಸ ಬಹಳ ಕಷ್ಟವಾಗುತ್ತದೆ. ಎಲ್ಲಾದರೂ ಅಂತಹ ನಿರ್ದಿಷ್ಟವಾದ ಕೇಸು ಬಂದರೆ ಯೋಚನೆ ಮಾಡಬಹುದು.

Cement concreting the Petta Road of Holenarasipur

*Q.—86. Sri H. D. DEVE GOWDA (Holenarasipur).—

Will the Minister for Municipal Administration be pleased to state :—

(*a*) the amount of Loan or Grant sanctioned for cement concreting the Petta Road of Holenarasipur Town ;

(*b*) when the same was sanctioned ;

(*c*) whether the amount was utilised for the purpose to which it was sanctioned ;

(*d*) if not, the action taken by the Government for misapplication of funds by the Municipality ;

(*e*) whether Government would take necessary steps to complete the cement concreting or at least asphalting the Petta Road ?

A.—Sri R. M. PATIL (Minister for Municipal Administration).—

(*a*) A sum of Rs. 16,700 has been sanctioned as grant for Town Improvement Work.

(*b*) 27th March 1962.